## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 665
ಸದಸ್ಯರ ಹೆಸರು : ಶ್ರೀ ಎನ್.ಅಪ್ಪಾಜಿಗೌಡ
ಉತ್ತರಿಸುವ ದಿನಾಂಕ : 22-07-2019
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ಬೆಳ್ಳೂರು ಹೋಬಳಿ ಕಾಳಂಗನಹಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿರುವ ಇಂದಿರಾಗಾಂಧಿ ವಸತಿ ಶಾಲೆ ಕಟ್ಟಡದ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ | ಬಂದಿದ್ದಲ್ಲಿ, ಸದರಿ ಕಾಮಗಾರಿಯನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ; (ಈ ಕಾಮಗಾರಿಯ ಅಂದಾಜು ವೆಚ್ಚದ ಪಟ್ಟಿ, ಅಂತಿಮ ಬಿಲ್ಲು ಮತ್ತು ಪ್ಲಾನ್‌ನೊಂದಿಗೆ ಗುತ್ತಿಗೆದಾರ ಸಂಪೂರ್ಣ ಮಾಹಿತಿ ನೀಡುವುದು) | ಈ ವಸತಿ ಶಾಲೆಯ ಕಟ್ಟಡ ಕಾಮಗಾರಿಯು ಪ್ರಗತಿ ಹಂತದಲ್ಲಿರುತ್ತದೆ. ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿ ಅರ್ಹತೆ ಪಡೆದ ಶ್ರೀ ಮನೋಹರ್ ಯಮಸಂಧಿ ಚಂದ್ರೇಗೌಡ, ನಂ.5423, ಹಳೆಯ ಹೌಸಿಂಗ್ ಬೋರ್ಡ್, ರವೀಂದ್ರ ನಗರ, ಹಾಸನ-573201 ರವರಿಗೆ ಗುತ್ತಿಗೆ ನೀಡಲಾಗಿದೆ. ವಿವರಗಳು ಕೆಳಕಂಡಂತಿವೆ.<br>(1) ಈ ಕಾಮಗಾರಿಯ ಅಂದಾಜು ಮೊತ್ತ ರೂ. 16.95 ಕೋಟಿಗಳು.<br>(2) ಗುತ್ತಿಗೆ ಮೊತ್ತ ರೂ. 17.03 ಕೋಟಿಗಳು.<br>(3) ಈವರೆಗೆ ಪಾವತಿಯಾದ ಮೊತ್ತ ರೂ. 6.73 ಕೋಟಿಗಳು ( 02 ಆರ್.ಎ. ಬಿಲ್‌ಗಳಲ್ಲಿ ಪಾವತಿಸಲಾಗಿದೆ )<br>(4) ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು ಅಂತಿಮ ಬಿಲ್ಲನ್ನು ಪಾವತಿಸಿರುವುದಿಲ್ಲ.<br>ಕಾಮಗಾರಿಗೆ ಅಂದಾಜು ಪಟ್ಟಿ & ನಿವೇಶನದ ನಕ್ಷೆಯನ್ನು ಅನುಬಂಧ-1 ದಲ್ಲಿ ನೀಡಿದೆ. |

---2

| | | |
|---|---|---|
| ಇ | ಸದರಿ ಕಟ್ಟಡದ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಕಟ್ಟಡ ಕಾಮಗಾರಿಯ ಗುಣಮಟ್ಟದ ಬಗ್ಗೆ ಗುಣಮಟ್ಟ ಪರಿಶೀಲನಾ ಪ್ರಾಧಿಕಾರದಿಂದ ವರದಿ ಪಡೆಯಲಾಗಿದೆಯೇ; (ವರದಿ ಪ್ರತಿ ಸಲ್ಲಿಸುವುದು) | ಈ ಕಾಮಗಾರಿಯು ತಾಂತ್ರಿಕ ಸಲಹೆಗಾರರಾದ ಮೆ॥ ಅಲ್ಕಾನ್ ಕನ್ಸಲ್ಟಿಂಗ್ ಇಂಜಿನಿಯರ್ಸ್ ಇಂಡಿಯಾ ಪ್ರೈ. ಲಿ., ಬೆಂಗಳೂರು ಇವರ ಉಸ್ತುವಾರಿಯಲ್ಲಿ ನಿರ್ಮಾಣವಾಗುತ್ತಿದೆ.<br><br>ಕಾಮಗಾರಿ ಕಳಪೆ ಗುಣಮಟ್ಟವಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಯ ಗುಣಮಟ್ಟದ ಪರಿವೀಕ್ಷಣೆಗೆ 3ನೇ ವ್ಯಕ್ತಿ ಮೆ॥ ಬ್ಯೂರೋ ವೆರಿಟಾಸ್‌ರವರಿಗೆ ವಹಿಸಲಾಗಿದೆ. ಈ ಸಂಸ್ಥೆಯು ದಿನಾಂಕ: 18.07.2019 ರಂದು ಪರಿವೀಕ್ಷಣೆ ನಡೆಸಿ ವರದಿ ನೀಡಿರುತ್ತಾರೆ. ಈ ವರದಿಯಲ್ಲಿ ಕಾಮಗಾರಿಯ ಕೆಲವು ಭಾಗಗಳಲ್ಲಿ ನ್ಯೂನತೆಗಳನ್ನು ಸರಿಪಡಿಸಲು ಸಲಹೆಗಳನ್ನು ನೀಡಿರುತ್ತಾರೆ, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು ಕಾಮಗಾರಿಯ ಗುಣಮಟ್ಟವನ್ನು ಮೆ॥ ಬ್ಯೂರೋ ವೆರಿಟಾಸ್‌ರವರು 10 ಹಂತಗಳಲ್ಲಿ ಪರಿವೀಕ್ಷಣೆ ನಡೆಸುವರು ಹಾಗೂ ಅವರ ಸೂಚನೆಯಂತೆ ಕ್ರಮ ಕೈಗೊಳ್ಳಲಾಗುವುದು. |
| ಈ | ಈ ಕಾಮಗಾರಿಗೆ ಸಂಬಂಧಿಸಿದ ಇಂಜಿನಿಯರ್‌ಗಳು ಮತ್ತು ಗುತ್ತಿಗೆದಾರರ ಮೇಲೆ ಯಾವ ರೀತಿಯ ಕಾನೂನು ಕ್ರಮ ಕೈಗೊಳ್ಳಲಾಗಿದೆ? | ಗುತ್ತಿಗೆದಾರರಿಗೆ ವಹಿಸಿದ ಕಾಮಗಾರಿಯು ಪ್ರಗತಿಯಲ್ಲಿದ್ದು, ಪೂರ್ಣಗೊಂಡಿರುವುದಿಲ್ಲ, ಸದರಿ ಕಾಮಗಾರಿಯ ಗುಣಮಟ್ಟವನ್ನು ಮೆ॥ ಬ್ಯೂರೋ ವೆರಿಟಾಸ್ ಇವರಿಂದ 10 ಹಂತಗಳಲ್ಲಿ ಪರಿವೀಕ್ಷಣೆ ನಡೆಸಿ ಅವರ ಸೂಚನೆಯಂತೆ ಕಾಮಗಾರಿಯನ್ನು ಪೂರ್ಣ ಗೊಳಿಸಲಾಗುವುದು. ಪ್ರಸ್ತುತ ಸದರಿ ಕಾಮಗಾರಿಯು ಪ್ರಗತಿ ಹಂತದಲ್ಲಿರುವುದರಿಂದ್ಧ, ಕಾನೂನು ಕ್ರಮ ಉದ್ಭವಿಸುವುದಿಲ್ಲ. |

ಸಕಇ 99 ಮೊದೇಶಾ 2019

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು